ಕ್ರೀಡೆಯಲ್ಲಿ ಯುವಜನ ಶಕ್ತಿಗೆ ಪ್ರೋತ್ಸಾಹ

186(679) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಉತ್ತರ ಕರ್ನಾಟಕದ ಶೈಕ್ಷಣಿಕ : ಮಹಾನಗರವಾಗಿದ್ದು ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದವರೆವಿಗೂ ಯುವಜನ ಶಕ್ತಿ ಅಪಾರ ಸಂಖ್ಯೆಯಲ್ಲಿ ಇರುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಧಾರವಾಡ ಮೊದಲಿನಿಂದಲೂ ಕುಸ್ತಿ ಪೈಲ್ವಾನರ ಅಕಾಡಾಗಳಿಂದ ಮತ್ತು ಗರಡಿ ಮನೆ ಗ್ರಾಮಗಳಲ್ಲಿ ತರಬೇತಿ ನೀಡುತ್ತಿರುವ ಯು ಶಕ್ತಿಗಳಿಗೆ ಸಾರ್ವಜನಿಕವಾಗಿ ಪ್ರೋತ್ಸಾಹಿಸಲು ಕುಸ್ತಿ ಥಿಯೇಟರ್‌ನ ಅವಶ್ಯಕತೆ ಸರ್ಕಾರ ಗಮನಿಸಿದೆಯೇ?

ಇ) ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಹಂತದ ಈಜು (ಸ್ವಿಮಿಂಗ್) ಸ್ಪರ್ಧೆ ನಡೆಸುವ ಕ್ರೀಡೆಗೆ ಯಾವ ಅವಕಾಶ ಮಾಡಿದೆ ತಿಳಿಸುವುದು?

ಈ) ಮೇಲಿನ ಎಲ್ಲಾ ಕ್ರೀಡೆಗಳಿಗೆ ಪ್ರೋತ್ಸಾಹಿಸಲು ಒಂದು ಬೃಹತ್ ಸಮುಚ್ಚಯ ರಚಿಸಲು ರಾಜ್ಯ ಮತ್ತು ಕೇಂದ್ರದ ಯೋಜನೆ ಇದೆಯೇ?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಗಮನಿಸಿದೆ.

ಆ) ಗಮನಿಸಲಾಗಿದೆ. ಕುಸ್ತಿ ಅಖಾಡಾ ಹಾಗೂ ಗರಡಿ ಮನೆ ಇವುಗಳಿಗೆ ಜಿಲ್ಲಾ ಪಂಚಾಯತ್ ಅಡಿಯಿಂದ ಅನುದಾನ ಒದಗಿಸಲಾಗುತ್ತಿದೆ.

ಇ) ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರದಲ್ಲಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಗೆ ಸೇರಿದ ಅಂತರ ರಾಷ್ಟ್ರ ಮಟ್ಟದ ಈಜು ಕೊಳವು ಇರುತ್ತದೆ. ಈ ಈಜುಕೊಳದಲ್ಲಿ 1995ರಲ್ಲಿ ಅಖಿಲ ಭಾರತ ಸರ್ಕಾರಿ ನೌಕರರ ಈಜು ಸ್ಪರ್ಧೆಗಳನ್ನು ಹಾಗೂ ರಾಜ್ಯ ಮಟ್ಟದ ಮಹಿಳಾ ಮತ್ತು ಗ್ರಾಮೀಣ ಈಜು ಸ್ಪರ್ಧೆಗಳನ್ನು ನಡೆಸಲಾಗಿದೆ.

ಈ ಈಜುಕೊಳವನ್ನು ಕರ್ನಾಟಕ ಕ್ರೀಡಾ ಪ್ರಾಧಿಕಾರವು 1997ರಲ್ಲಿ ಗುತ್ತಿಗೆ ಆಧಾರದ ಮೇಲೆ ಪಡೆದು, ಈಜು ತರಬೇತಿದಾರರಿಂದ 50 ಬಾಲಕ : ಬಾಲಕಿಯರನ್ನು ವೈಜ್ಞಾನಿಕ ರೀತಿಯಲ್ಲಿ ತರಬೇತುಗೊಳಿಸಲಾಗಿದೆ.

ಈ ಈಜುಕೊಳದಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಸೇರಿದ ವಿವಿಧ ವಯೋಮಾನ ಕ್ಕೊಳಪಟ್ಟಂತೆ 12 ಈಜು ಸ್ಪರ್ಧೆಗಳನ್ನು ನಡೆಸಲಾಗಿದೆ. 5 ವಿಶ್ವ ವಿದ್ಯಾನಿಲಯದ ವ್ಯಾಪ್ತಿಗೆ ಬರುವ ಅಂತರ ಕಾಲೇಜು ಈಜು ಸ್ಪರ್ಧೆಗಳನ್ನು ನಡೆಸಲಾಯಿತು.

ಈ ಮೇಲೆ ತಿಳಿಸಿದ ಎಲ್ಲಾ ಈಜು ಸ್ಪರ್ಧೆಗಳಲ್ಲಿ ಇದೇ ಈಜು ಕೊಳದಲ್ಲಿ ತರಬೇತು ಪಡೆದಂತಹ 50ಕ್ಕೂ ಮೇಲ್ಪಟ್ಟು ಕ್ರೀಡಾಪಟುಗಳು ಭಾಗವಹಿಸಿ, ಹಲವಾರು ಬಹುಮಾನಗಳನ್ನು ಪಡೆದಿದ್ದಾರೆ.

ಈ) ಈಗಾಗಲೇ ಧಾರವಾಡ ಜಿಲ್ಲಾ ಕೇಂದ್ರದಲ್ಲಿ ಹೊರಾಂಗಣ ಕ್ರೀಡಾಂಗಣ ಲಭ್ಯವಿದ್ದು, ಈಗಾಗಲೇ ರೂ. 99.78 ಲಕ್ಷಗಳಿಗೆ ಅಂದಾಜು ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಐಟಿಐ ಕಾಲೇಜು ಸ್ಥಾಪಿಸುವುದು

187(682) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ವ್ಯಾಪ್ತಿಯ ಸಂತ್ರಸ್ತರ ಪುನರ್ವಸತಿ ಕೇಂದ್ರಗಳಲ್ಲಿ ಐ.ಟಿ.ಐ. ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಎಲ್ಲೆಲ್ಲಿ ಈ ರೀತಿಯ ಕೇಂದ್ರಗಳನ್ನು ಮಂಜೂರು ಮಾಡಲು ಉದ್ದೇಶಿಸಿದೆ?

ಇ) ಉದ್ದೇಶಿಸಿದ್ದಲ್ಲಿ ಬಸವನಬಾಗೇವಾಡಿ ತಾಲ್ಲೂಕು ಕೊಲ್ಲಾರ ಹಾಗೂ ಬಿಜಾಪುರ ತಾಲ್ಲೂಕು ಕೃಷ್ಣನಗರಗಳು ಸೇರಲ್ಪಟ್ಟಿವೆಯೇ?

ಈ) ಸೇರ್ಪಡೆಯಾಗಿದ್ದಾರೆ ಯಾವಾಗ ಕಾರ್ಯಾರಂಭ ಮಾಡಲಾಗುತ್ತದೆ?

ಉ) ಪ್ರಾರಂಭಿಸಿದಲ್ಲಿ ಮಂಜೂರಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು):

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

ಉ) ಅನ್ವಯಿಸುವುದಿಲ್ಲ.

ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದು

188(727) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿರುವ ಮಜರ್ ಗ್ರಾಮಗಳೆಷ್ಟು ತಾಂಡಾಗಳೆಷ್ಟು?

ಆ) ಮಜರ್ ಗ್ರಾಮಗಳನ್ನು ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಇದ್ದಲ್ಲಿ ಯಾವಾಗಿನಿಂದ ಕಂದಾಯ ಗ್ರಾಮವೆಂದು ಘೋಷಿಸಲಾಗುತ್ತದೆ?